# ಆಹಾ ಸುದ್ದಿ!

★ ಸಸಿತೋಟ




ಖ್ಯಾತ ಒಳ ಉಡುಪು ಸಂಸ್ಥೆ ಟ್ರೈಂಫ್ ಜಪಾನಿನಲ್ಲಿ ಒಮೊಟೆನಾಷಿ ಕಂಚುಕವನ್ನು ಮಾರುಕಟ್ಟೆಗೆ ಬಿಟ್ಟಿದೆಯಂತೆ. ಹಾಗೆಂದರೆ ಅತಿಥಿಗಳಿಗೆ ಸಹೃದಯದ ಆತಿಥ್ಯ ನೀಡುವುದು ಎಂದು ಅರ್ಥವಂತೆ. ಹೃದಯಕ್ಕೆ ಸಮೀಪವಾದ ಈ ಉಡುಪಿನಲ್ಲಿ ಕಪ್ ಹಾಗೂ ಟವೆಲ್‌ಗಳನ್ನು ಇಟ್ಟುಕೊಳ್ಳಬಹುದು. ಅತಿಥಿ ಕಂಡ ಕೂಡಲೇ ಅವುಗಳನ್ನು ಹೊರ ತೆಗೆದು ಆತಿಥ್ಯ ಶುರು ಮಾಡಲು ಅಡ್ಡಿಯಿಲ್ಲ! ಆದರೆ ಮಿನಿ ಪರ್ಸ್ ಇಟ್ಟುಕೊಳ್ಳುವ ಭಾರತೀಯರ ಅಭ್ಯಾಸ ಟ್ರೈಂಫ್‌ಗೆ ತಿಳಿದಂತಿಲ್ಲ

ಖ್ಯಾತ ಹಾಲಿವುಡ್ ನಟ ಜಾರ್ಜ್ ಕ್ಲೂನಿ ಹೋಲಿಕೆಯುಳ್ಳ ಲಂಡನ್ನಿನ ಲಾಂಡ್ರಿ ಮಾಲೀಕ ಗ್ಯಾರಿ ಟೇಟ್ ಖಜಾನೆಯನ್ನೇ ಕೊಳ್ಳೆ ಹೊಡೆದವರಂತಿದ್ದ. ಕ್ಲೂನಿಯ ಫೀ ಭರಿಸಲಾರದವರು ಗ್ಯಾರಿಯನ್ನೇ ಅಂತರರಾಷ್ಟ್ರೀಯ ಚಲನಚಿತ್ರ ಸಮಾರಂಭಗಳಿಗೆ ಕರೆದರು. ಕ್ಲೂನಿಯ ಕ್ರೇಜ್ ಇರುವ ಯುವತಿಯರು ಡೇಟಿಂಗ್‌ಗೆ ಆಹ್ವಾನಿಸುತ್ತಿದ್ದರು. ಆದರೆ ಈಗ ಕ್ಲೂನಿ ಕ್ರೇಜ್‌ನಿಂದ ಮಾನಸಿಕ ಆಸ್ಪತ್ರೆ ಸೇರಿದ ಹೆಂಡತಿಯ ಜೊತೆ ಕಾಲ ಕಳೆದರೆ 5 ಸಾವಿರ ಪೌಂಡ್ ಕೊಡುವುದಾಗಿ ಉದ್ಯಮಿಯೊಬ್ಬ ಹೇಳಿದ್ದಾನಂತೆ. ಈಗ ಗ್ಯಾರಿಯ ಖಜಾನೆಯನ್ನು ಬೇರೆ ಯಾರೋ ಕೊಳ್ಳೆ ಹೊಡೆದಿರಬಹುದು!

ನೇರವಾಗಿ ಮಾತನಾಡಿದರೇ ಈ ಕಾಲದಲ್ಲಿ ಅನರ್ಥ ಮಾಡಿಕೊಳ್ಳುವವರು ಬೇಕಾದಷ್ಟು ಮಂದಿ ಇದ್ದಾರೆ. ಅಂತಹುದರಲ್ಲಿ ಸ್ಕಾಟ್ಲೆಂಡ್‌ನ ಹತ್ತು ವರ್ಷದ ಹುಡುಗ ಕ್ಯಾಮೆರಾನ್ ಇಂಗ್ಲಿಷ್ ಶಬ್ದಗಳನ್ನು ಕರಾರುವಾಕ್ಕಾಗಿ ಉಲ್ಟಾ ಉಚ್ಚರಿಸುತ್ತಾನಂತೆ. ಈತನಿಗೆ ಬ್ಯಾಕ್‌ವರ್ಡ್ ಸ್ಪೀಕ್ ಎಂದೇ ಹೆಸರಿಟ್ಟಿದ್ದಾರಂತೆ. ಮಗ ಮಾತನಾಡಿದ್ದನ್ನು ಅನುವಾದಿಸಲು ಪಾಲಕರು ಐಪ್ಯಾಡ್ ಸಹಾಯ ಪಡೆಯುತ್ತಿದ್ದಾರಂತೆ. ಎಲ್ಲವೂ ಹೈಟೆಕ್ ಮೊರೆ ಹೋಗುವ ಈ ಕಾಲದಲ್ಲಿ ಇಂತಹ ಪರಿಸ್ಥಿತಿ ಬರುವುದು ಸಹಜವೇ ಬಿಡಿ.



ಜರ್ಮನಿಯಲ್ಲಿ ನಡೆದ ವಾಹನ ಪ್ರದರ್ಶನದಲ್ಲಿ ಪ್ರದರ್ಶಿಸಿದ ಓಕ್ ಮರದ ಫೋಕ್ಸ್‌ವ್ಯಾಗನ್ ಕಾರಿದು. ಓಕ್ ಮರದ 20 ಸಾವಿರ ತುಂಡುಗಳನ್ನು ಸೇರಿಸಿ ಈ ಕಾರನ್ನು ತಯಾರಿಸಲಾಗಿದೆಯಂತೆ. ರಸ್ತೆಯ ಮೇಲೂ ಓಡಿಸಲು ಪರವಾನಗಿ ಸಿಕ್ಕಿದೆಯಂತೆ. ವಿನ್ಯಾಸದಲ್ಲಿ ನಮ್ಮ ಚಕ್ಕಡಿ ಗಾಡಿ, ಜಟಕಾ ಗಾಡಿಯ ಪೇಟೆಂಟ್ ಕದ್ದಂತಿದೆ ಈ ಕಾರು.



ವರ್ಜಿನ್ಸ್‌ವಾಂಟೆಡ್2.ಕಾಂ ಬಿಡುಗಡೆ ಮಾಡಿದ ಬ್ರೆಜಿಲ್‌ನ ಕ್ಯಾಥೆರಿನ್ ಎಂಬ ಎದೆಗಾತಿಯ ಚಿತ್ರ. ಆಕೆ ಕಳೆದ ವರ್ಷವೇ ತನ್ನ ಕೌಮಾರ್ಯವನ್ನು ಆನ್‌ಲೈನ್‌ನಲ್ಲಿ 78 ಸಾವಿರ ಡಾಲರ್‌ಗೆ ಮಾರಾಟಕ್ಕೆ ಇಟ್ಟಿದ್ದಳು. ಯಾರೂ ಆಸಕ್ತಿ ತೋರದ ಕಾರಣ ಈ ವರ್ಷ ಮತ್ತೆ ಆನ್‌ಲೈನ್ ಹರಾಜಿನಲ್ಲಿ ಪಾಲ್ಗೊಂಡಿದ್ದಾಳಂತೆ. ಅದೃಷ್ಟ ಈ ವರ್ಷವೂ ಕೈಕೊಟ್ಟರೆ... ಬಹಿರಂಗ ಮಾರುಕಟ್ಟೆಗೆ ಮುಂದಿನ ಹೆಜ್ಜೆ ಇರಬಹುದು.



ಜರ್ಮನಿಯ ತೋಳ ಸಂಶೋಧಕ ವೆರ್ನರ್ ಜಿಂಕೆ ಮಾಂಸಕ್ಕಾಗಿ ತೋಳದ ಜೊತೆಗೇ ಪೈಪೋಟಿಗೆ ಇಳಿದಂತಿದೆ. ಸಂಶೋಧನೆ ಇಷ್ಟು ಸುಲಭ ಎಂತಾದರೆ ತೋಳವೂ ಸಂಶೋಧನೆಯಲ್ಲಿ ಪೈಪೋಟಿ ನೀಡಬಹುದೇನೋ, ಮಾನವನ ಮೇಲೆ.